**ದಿನಾಂಕ 10-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ಐಟಂ ನಂ 4 ರ ಸ್ವತ್ತಿನಲ್ಲಿ MT Educare ನವರು Mahesh PU College ನಡೆಸುತಿದ್ದರು ಎಂದರೆ ಸರಿ. MT Educare ನವರು ತಿಂಗಳಿಗೆ ರೂ 98,000/- ಬಾಡಿಗೆ ಕೊಡುತಿದ್ದರು ಎಂದರೆ ಸಾಕ್ಷಿ ಒಂದನೇ ಪ್ರತಿವಾದಿ ರೂ. 98,000/- ಗಳನ್ನು MT Educare ನವರು ಕೊಡುತಿದ್ದಾರೆ ಎಂದು ನನಗೆ ತಿಳಿಸಿದ್ದರು ಎಂದು ಸಾಕ್ಷ್ಯ ನುಡಿದಿರುತಾರೆ . ಈ ಮೊದಲು ಡೆಪಾಸಿಟ್ ಮಾಡಿದ್ದ ತಲಾ 4 ಲಕ್ಷಗಳನ್ನೇ ಇದ್ದಕ್ಕೂ ಡೆಪಾಸಿಟ್ ಎಂದು ಪರಿಗಣಿಸಬೇಕು ಎಂದು ಕರಾರಿನಲ್ಲಿ ತಿಳಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಅದನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನೇ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ . ಸಾಕ್ಷಿಗೆ ಈ ಬಗ್ಗೆ ಬಾಡಿಗೆ ಕರಾರನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಒಂದನೇ ಪ್ರತಿವಾದಿ ನನ್ನ ಅಣ್ಣನೇ ಕರಾರನ್ನು ರೆಡಿ ಮಾಡಿಸಿರುತ್ತಾರೆ . ಅದರಲ್ಲಿ ಕಾಣುವ ಫೋಟೋ ನನ್ನ ರೀತಿಯೇ ಕಾಣುತಿದೆ . ಆದರೇ ನಾನು ಸಬ್ ರಿಜಿಸ್ಟ್ರಾರ್ ಕಚೇರಿಯಿಂದ ದೃಡಿಕೃತ ಪ್ರತಿಯನ್ನು ನೋಡಿ ತೆಗೆದು ನೋಡಬೇಕು ಈಗ ಒಪ್ಪಿಕೊಳ್ಳಲು ಆಗುವುದಿಲ್ಲ ಎಂದು ತಿಳಿಸಿರುತ್ತಾರೆ . ಮೂಲ ದಾಖಲೆಗಳನ್ನು ನೋಡಿ ಹೇಳಲು ಆಗದೇ ದೃಢಿಕೃತ ಪ್ರತಿಯನ್ನು ನೋಡಿ ಹೇಳುತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಮೂಲ ದಾಖಲೆಯನ್ನು ಕೂಡ ಈಗಲೇ ನಾನು ನೋಡುತಿದ್ದೇನೆ ಎಂದು ತಿಳಿಸಿರುತ್ತಾರೆ . ಮೂಲ ದಾಖಲೆಯಲ್ಲಿ ಇರುವ ಸಹಿಯನ್ನು ನೋಡಿ ಗುರುತಿಸಲು ಸಾಧ್ಯ ಇದೆಯೇ ಇಲ್ಲವೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಮೂಲ ದಾಖಲೆ ಎಂದು ನೀವು ಹೇಳುತಿದ್ದೀರಿ ಆದರೇ ನಾನು ಒಪ್ಪುವುದಿಲ್ಲ. ಆದ್ದರಿಂದ ದೃಢಿಕೃತ ಪ್ರತಿಯನ್ನು ನೋಡಿ ಹೇಳಬೇಕಾಗುತ್ತದೆ ಎಂದು ಸಾಕ್ಷಿ

ತಿಳಿಸಿರುತ್ತಾರೆ. ಸಾಕ್ಷಿಗೆ ಪುನಃ  ಅದೇ ದಾಖಲೆಯನ್ನು ತೋರಿಸಿ ಅದು ಫೋಜ್ರರಿ ದಾಖಲೆ ಎಂದು ಹೇಳುತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ಹೇಳಲು ಆಗುವುದಿಲ್ಲ ಫೋಜ್ರರಿ ಕೂಡ ಮಾಡಿದ್ದಾರೆ ಮತ್ತು ನನ್ನ ಸಹಿಯನ್ನು ಕೂಡ ಫೋಜ್ರರಿ ಮಾಡಿದ್ದಾರೆ ಎಂದು ಸಾಕ್ಷಿ ತಿಳಿಸಿರುತ್ತಾರೆ. MT Educare ನವರಿಗೆ ಬಾಡಿಗೆ ಕರಾರಿನ ಮುಖೇನ ಬಾಡಿಗೆಗೆ ಕೊಟ್ಟ ವಿಷಯ ಗೊತ್ತಿದಿಯೋ ಇಲ್ಲವೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ಬಾಡಿಗೆಗೆ ಕೊಟ್ಟ ವಿಷಯ ಗೊತ್ತು. ಆದರೇ ನನ್ನ ಸಹಿಯನ್ನು ಖಾಲಿ ಪತ್ರಗಳಿಗೆ ಪಡೆಯುತಿದ್ದರು ಎಂದು ತಿಳಿಸಿರುತ್ತಾರೆ . ಬಾಡಿಗೆ ಚೀಟಿಯ ದೃಢಿಕೃತ ಪ್ರತಿಯನ್ನು ಸಬ್ ರಿಜಿಸ್ಟ್ರಾರ್ ಕಚೇರಿಯಿಂದ ಪಡೆಯಲು ತೊಂದರೆ ಇತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ಸದ್ರಿ ದಾಖಲೆಯನ್ನು ಪಡೆಯಲು ಅದರ ನಂಬರ್ ಗೊತ್ತಿರಲಿಲ್ಲ ಎಂದು ತಿಳಿಸಿರುತ್ತಾರೆ. ಸಬ್ ರಿಜಿಸ್ಟ್ರಾರ್ ಕಚೇರಿಯಿಂದ ದಾಖಲೆಯನ್ನು ಪಡೆದು ಹಾಜರುಪಡಿಸಲು ತೊಂದರೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ನನಗೆ ಜೆರಾಕ್ಸ್ ಕೊಟ್ಟರೇ ಅದರ ಮುಖೇನ ನಾನು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಹುಡುಕಿಸಿ ದಾಖಲೆಯನ್ನು ಪಡೆದು ಹಾಜರುಪಡಿಸುತ್ತೇನೆ ಎಂದು ತಿಳಿಸಿರುತ್ತಾರೆ . ಪ್ರತಿ ತಿಂಗಳು ನನ್ನ ಖಾತೆಗೆ ರೂ 49000 ಬಾಡಿಗೆ ಜಮೆ ಆಗುತಿತ್ತು ಎಂದರೆ ನನಗೆ ಗೊತ್ತಿಲ್ಲ. ಎಲ್ಲವನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನೇ ನೋಡಿಕೊಳ್ಳುತಿದ್ದರು ಎಂದು  ತಿಳಿಸಿರುತ್ತಾರೆ . ನನ್ನ ಆದಾಯ ತೆರಿಗೆ ರಿಟನ್ಸ್ ನಲ್ಲಿ ನನಗೆ ಬರುತಿದ್ದ ರೂ 49000  ಬಾಡಿಗೆಯನ್ನು ನಾನು ನಮೂದು ಮಾಡಿದ್ದೇನೆ ಎಂದರೆ ಸಾಕ್ಷಿ ಒಂದನೇ ಪ್ರತಿವಾದಿ ನನ್ನ ಅಣ್ಣನೇ ನನ್ನ ರಿಟನ್ಸ್ ನ್ನು 2020 ರವರೆಗೆ ಸಲ್ಲಿಸುತಿದ್ದರು ಎಂದು ತಿಳಿಸಿರುತ್ತಾರೆ . ಸದ್ರಿ ರೂ 49000 ಬಾಡಿಗೆ ಪ್ರತಿ ತಿಂಗಳು  ಉಡುಪಿಯ ನನ್ನ ಖಾತೆ ಇರುವ ಆಕ್ಸಿಸ್ ಬ್ಯಾಂಕ್ ಗೆ ಜಮೆ ಆಗುತ್ತಿತು ಎಂದರೆ ಸಾಕ್ಷಿ 2020 ರವರೆಗೆ ಎಲ್ಲವನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನೇ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ . ನನ್ನ ಬ್ಯಾಂಕ್

ಖಾತೆಯನ್ನು ನಾನು ನಿರ್ವಹಣೆ ಮಾಡುತ್ತಿರಲಿಲ್ಲ ಒಂದನೇ ಪ್ರತಿವಾದಿಯೇ ನಿರ್ವಹಣೆ ಮಾಡುತಿದ್ದರು. ಈ ಅವದಿಯಲ್ಲಿ ನಾನು ಎಂದೂ ಕೂಡ ಬ್ಯಾಂಕ್ ಸ್ಟೇಟ್‌ಮೆಂಟ್ ನ್ನು ನೋಡಿಲ್ಲ. MT Educare Charitable Trust ನವರಿಗೆ ಐಟಂ ನಂ 4 ರ ಸ್ವತ್ತನ್ನು ಬಾಡಿಗೆಗೆ ಯಾವಾಗ ಬಿಟ್ಟು ಕೊಟ್ಟೆವು ಎಂದು ನನಗೆ ಗೊತ್ತಿಲ್ಲ. MT Educare ರವರು ಕೊನೆಯ ಬಾರಿಗೆ ಬಾಡಿಗೆಯನ್ನು ಯಾವಾಗ ನನ್ನ ಖಾತೆಗೆ ಹಾಕಿದರು ಎಂದು ನನಗೆ ಗೊತ್ತಿಲ್ಲ . MT Educare ನವರು ಎಪ್ರಿಲ್ 2015 ರಂದು ಕೊನೆಯ ಬಾರಿಗೆ ಜಮಾ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಬಾಡಿಗೆ ಅವದಿ ಮುಗಿದ ನಂತರ MT Educare ನವರಿಗೆ ಅವರು ಕೊಟ್ಟಿದ್ದ ಡೆಪಾಸಿಟ್ ತಲಾ 4 ಲಕ್ಷ ಒಟ್ಟು 8 ಲಕ್ಷ ಹಣವನ್ನು ಒಂದನೇ ಪ್ರತಿವಾದಿಯಾದ ನನ್ನ ಅಣ್ಣ ಅವರ ಖಾತೆಯಿಂದ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಬಾಡಿಗೆ ಬಂದ ಹಣವನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನೇ ಪಡೆಯುತಿದ್ದರು ಆದ್ದರಿಂದ ಅವರೇ ಕೊಟ್ಟಿರುತ್ತಾರೆ ಮತ್ತು ಅವರೇ ಎಲ್ಲವನ್ನು ನಿರ್ವಹಿಸುತಿದ್ದರು ಎಂದು ತಿಳಿಸಿರುತ್ತಾರೆ . ನನ್ನ ಖಾತೆಯಿಂದ ಒಂದನೇ ಪ್ರತಿವಾದಿ ನನ್ನ ಅಣ್ಣ ಹಣ ಪಡೆದು ಉಪಯೋಗಿಸಿಕೊಳ್ಳುತಿದ್ದರು ಎಂದು ನಿಮ್ಮ ಬ್ಯಾಂಕ್ ಸ್ಟೇಟ್‌ಮೆಂಟ್ ನಲ್ಲಿ ಕಂಡುಬರುತಿದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಚೆಕ್ ಗಳಿಗೆ ನನ್ನ ಸಹಿ ಪಡೆದು ಹೋಗುತಿದ್ದರು ಎಂದು ತಿಳಿಸಿರುತ್ತಾರೆ .ಸಾಕ್ಷಿ ಮುಂದುವರಿದು ನಮ್ಮ ಖಾತೆಯಿಂದ 10 ರೂಪಾಯಿ ತೆಗೆಯಲು ಕೂಡ ನಮಗೆ ಅವಕಾಶ ಇರಲಿಲ್ಲ, ಒಂದನೇ ಪ್ರತಿವಾದಿ ನನ್ನ ಅಣ್ಣ ನಾವು ಹಣ ತೆಗೆದರೇ ಮತ್ತು ಬೇರೆ ಕಡೆ ಖಾತೆ ತೆರೆದರೇ ಆದಾಯ ತೆರಿಗೆ ಇಲಾಖೆಯಿಂದ ಸಮಸ್ಯೆ ಆಗುತ್ತದೆ ಎಂದು ಎಲ್ಲವನ್ನು ತಾನೇ ನೋಡಿಕೊಳ್ಳುವುದಾಗಿ ತಿಳಿಸುತಿದ್ದರು . ಯಾರ ಹೆಸರಿಗೆ ಚೆಕ್ ನ್ನು ಪಡೆಯುತಿದ್ದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಖಾಲಿ ಚೆಕ್ ಗೆ ಸಹಿ ಪಡೆದುಕೊಂಡು ಹೋಗುತಿದ್ದರು ಎಂದು ತಿಳಿಸಿರುತ್ತಾರೆ . 2020 ರಲ್ಲಿ ಈ ದಾವೆ ಹಾಕುವಾಗ

ಬ್ಯಾಂಕ್ ಸ್ಟೇಟ್ ಮೆಂಟ್ ತೆಗೆದು ನೋಡಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸ್ಟೇಟ್ ಮೆಂಟ್ ತೆಗೆದಿಲ್ಲ ಎಂದು ತಿಳಿಸಿರುತಾರೆ . ಮುಂದುವರಿದು 2002 ರಲ್ಲಿ ಆದಾಯ ತೆರಿಗೆ ಇಲಾಖೆಗೆ ರಿಟನ್ಸ ಸಲ್ಲಿಸುವಾಗ ಒಂದು ಬಾರಿ ಮಾತ್ರ ಸ್ಟೇಟ್ ಮೆಂಟ್ ತೆಗೆಯಲಾಗಿತ್ತು ಎಂದು ತಿಳಿಸಿರುತ್ತಾರೆ. 19-03-2012 ರಂದು ನಾನು ಮತ್ತು 2 ನೇ ಪ್ರತಿವಾದಿ ಕೊಟ್ಟ ಜಿಪಿಎ ಆದಾರದ ಮೇಲೆ ಐಟಂ ನಂ 4 ರ ಸ್ವತ್ತು ನಿಪಿ 91 ರ ಪ್ರಕಾರ Settlement Deed ಆಗಿದೆ ಎಂಂದರೆ ಸಾಕ್ಷಿ ನಾವು ಜಿಪಿಎ ರದ್ದುಗೊಳಿಸಿದ ನಂತರ ಫೋಜ್ರರಿ ಮಾಡಿ ಮಾಡಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ . ನಮ್ಮ ದಾವಪತ್ರದಲ್ಲಿ ಒಂದನೇ ಪ್ರತಿವಾದಿ ನನ್ನ ಅಣ್ಣ ಖಾಲಿ ಚೆಕ್ ಗಳಿಗೆ ನಮ್ಮ ಸಹಿ ಪಡೆದು ಹಣ ಪಡೆಯುತಿದ್ದರು ಎಂದು ಹೇಳಿಲ್ಲ, ಅದರೇ ನಮ್ಮ ವಕೀಲರಿಗೆ ಹೇಳಿರುತ್ತೇನೆ. ನಾನು ಜಿಪಿಎಯನ್ನು ರದ್ದುಗೊಳಿಸಿದ ನಂತರ ಕೂಡ ಒಂದನೇ ಪ್ರತಿವಾದಿ ನನ್ನ ಅಣ್ಣ ನನ್ನ ಬ್ಯಾಂಕ್ ಖಾತೆ ಮತ್ತು ಅದಾಯ ತೆರಿಗೆ ಇಲಾಖೆಗೆ ಸಲ್ಲಿಸಬೇಕಾದ ರಿಟನ್ಸ್ ಮತ್ತು ಎಲ್ಲಾ ಆಸ್ತಿಗಳನ್ನು ಅವರೇ ನೋಡಿಕೊಳ್ಳುತಿದ್ದರು. ಸಾಕ್ಷಿ ಮುಂದುವರಿದು ನಮ್ಮೊಳಗೆ ಪಾಲು ಮಾಡಿಕೊಳ್ಳೋಣ ಎಂದು ಹೇಳುತ್ತಾ ಮುಂದೆ ಹಾಕುತಿದ್ದರು ಎಂದು ತಿಳಿಸಿರುತ್ತಾರೆ . ಜಿಪಿಎ ರದ್ದುಗೊಳಿಸಿದ್ದೇನೆ ಆದ್ದರಿಂದ ನನ್ನ ಅಣ್ಣ ಯಾವುದೇ ಚೆಕ್ ಹಾಕಿದರೇ ಯಾವುದೇ ವ್ಯವಹಾರ ಮಾಡಬಾರದು ಎಂದು ಇಂಟಿಮೇಶನ್ ಕೊಟ್ಟಿರುವುದಿಲ್ಲ. ಆದರೇ ಪೇಪರ್ ನಲ್ಲಿ ಹಾಕಿರುತ್ತೇನೆ ಎಂದು ತಿಳಿಸಿರುತ್ತಾರೆ . ಒಂದನೇ ಪ್ರತಿವಾದಿ ನಿಮ್ಮ ಅಣ್ಣ ನಮ್ಮ ಹಣವನ್ನು ಮತ್ತು ಆಸ್ತಿಗಳನ್ನು ದುರ್ಭಳಕೆ ಮಾಡುತಿದ್ದಾರೆ ಎಂದು ಯಾವಾಗ ಕಂಡುಬಂದಿತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 2016 ಡಿಸೆಂಬರ್ ನಿಂದ ಪ್ರಾರಂಭವಾಗಿ ಮನೆಯಲ್ಲಿ ಇದ್ದ ನನ್ನ ಮತ್ತೊಬ್ಬ ಸಹೋದರನಿಗೆ ಬ್ಯಾಂಕ್ ನಿಂದ ಸಾಲ ಮಾಡುವುದಾಗಿ ಹೆದರಿಸುತಿದ್ದರು ಮತ್ತು ಹಣವನ್ನು ವೇಸ್ಟ್ ಆಗಿ ಖರ್ಚು ಮಾಡುತಿದ್ದರು. ಆದ್ದರಿಂದ ಅವರು ದುರ್ಬಳಕೆ ಮಾಡುತಿದ್ದಾರೆ ಎಂದು

ಗೊತ್ತಾಯಿತು. ಆ ರೀತಿ ಗೊತ್ತಾದ ನಂತರ ಕೂಡ ನೀವು ಒಂದನೇ ಪ್ರತಿವಾದಿಗೆ ಕೊಡುತಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ಖಾಲಿ ಚೆಕ್‌ಬುಕ್ ಗೆ ಸಹಿ ಮಾಡಿ ಕೊಟ್ಟಿದ್ದೆ ಎಂದು ತಿಳಿಸಿರುತ್ತಾರೆ. ನಮ್ಮ ಬ್ಯಾಂಕ್ ನ ವ್ಯವಹಾರವನ್ನು ಕೂಡ ಅವರೇ ಮಾಡುತಿದ್ದರು ಕಾರಣ ನಮಗೆ ಆಸೆ ಹುಟ್ಟಿಸಿದ್ದರು ಎಂದು ತಿಳಿಸಿರುತ್ತಾರೆ . ನಮ್ಮ ಚೆಕ್ ಗಳನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎನ್ನುವ ಬಗ್ಗೆ ಈ ಕೇಸು ಹಾಕುವಾಗ ನಾನು ಪರಿಶೀಲಿಸಲಿಲ್ಲ ಕಾರಣ ಅದರ ಅವಶ್ಯಕತೆ ಬರಲಿಲ್ಲ. ದಾಖಲೆಗಳನ್ನು ಪರಿಶೀಲಿಸದೇ ಮತ್ತು ಬ್ಯಾಂಕ್ ಸ್ಟೇಟ್ ಮೆಂಟ್ ಗಳನ್ನು ಪರಿಶೀಲಿಸದೇ ಒಂದನೇ ಪ್ರತಿವಾದಿ ನಿಮ್ಮ ಅಣ್ಣ ನಿಮ್ಮ ಹಣ ಮತ್ತು ಆಸ್ತಿಗಳನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಯಾವಾ ಆದಾರದಲ್ಲಿ ಹೇಳುತಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಒಂದನೇ ಪ್ರತಿವಾದಿ ಬಾಯಿ ಮಾತಿನಲ್ಲಿ ನಮಗೆ ಹೆದರಿಸುತಿದ್ದರು ಮತ್ತು ಅವರ ವರ್ತನೆಯಲ್ಲಿ ಬದಲಾವಣೆ ಕಂಡುಬಂದಿತು ಎಂದು ತಿಳಿಸಿರುತತಾರೆ . ದಾವೆ ಹಾಕಿದ ನಂತರವಾದರೂ ಕೂಡ ಬ್ಯಾಂಕ್ ಸ್ಟೇಟ್‌ಮೆಂಟ್ ಮತ್ತು ಆ ಸಮಯದ ಆದಾಯ ತೆರಿಗೆಯ ರಿಟನ್ಸ್ ಗಳನ್ನು ಪರಿಶೀಲಿಸಲು ತೊಂದರೆ ಇತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಮ್ಮ ವಕೀಲರು ಈ ವಿಭಾಗ ದಾವೆಗೆ ಅದು ಎಲ್ಲಾ ಬೇಕಾಗಿಲ್ಲ ಎಂದು ಹೇಳಿದ್ದರು ಆದ್ದರಿಂದ ಪರಿಶೀಲಿಸಲಿಲ್ಲ ಎಂದು ತಿಳಿಸಿರುತ್ತಾರೆ. ನಮ್ಮ ಖಾತೆಗಳಿಗೆ ಎಷ್ಟು ಹಣ ಜಮೆ ಆಗಿದೆ ಎಂದು ನಾನು 2020 ರವರೆಗೆ ನೋಡಿಲ್ಲ . ನಮ್ಮ ಹೆಸರಿನಲ್ಲಿ ಎಷ್ಟು ಶೇರ್ ಗಳನ್ನು ಖರೀದಿಸಿದ್ದಾರೆ ಎಂದು ಗೊತ್ತಿಲ್ಲ . ಸಾಕ್ಷಿ ಮುಂದುವರಿದು ನಮ್ಮ ಹೆಸರಿನಲ್ಲಿ ಖರೀದಿಸಿ ಅವರ ಹೆಸರಿಗೆ ವರ್ಗಾವಣೆ ಮಾಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ . Settlement Deed ನ ನಂತರ ಒಂದನೇ ಪ್ರತಿವಾದಿಯಾದ ನನ್ನ ಅಣ್ಣ MT Educare ಗೆ ಇನ್ನು ಮುಂದೆ ಬಾಡಿಗೆಯನ್ನು ತನಗೆ ಕೊಡಬೇಕು ಎಂದು ಅವರಿಗೆ ಲಿಖಿತವಾಗಿ ತಿಳಿಸಿದ ಬಗ್ಗೆ ನನಗೆ ಗೊತ್ತಿಲ್ಲ . Settlement Deed ನ್ನು ನಾವು

ಮಾಡಿಕೊಟ್ಟಿಲ್ಲ ಜಿಪಿಎ ರದ್ದುಗೊಳಿಸಿದ ನಂತರ ಮೋಸದಿಂದ ಮಾಡಿಕೊಂಡಿದ್ದಾರೆ ಎಂದು ತಿಳಿಸಿರುತ್ತಾರೆ . ಮೇ 2017 ರ ನಂತರ MT Educare ನವರು ಒಂದನೇ ಪ್ರತಿವಾದಿ ನನ್ನ ಅಣ್ಣನ ಖಾತೆಗೆ ಬಾಡಿಗೆಯನ್ನು ಜಮಾ ಮಾಡುತ್ತಾ ಬರುತ್ತಿದ್ದಾರೆ ಎಂದರೆ ಸಾಕ್ಷಿ ನಾನು ನೋಡಿಲ್ಲ ಎಲ್ಲವನ್ನು ಅವರೇ ನೋಡಿಕೊಂಡು ಬರುತಿದ್ದಾರೆ ಎಂದು ತಿಳಿಸಿರುತಾರೆ . ಎಪ್ರೀಲ್ 2017 ರ ಬಾಡಿಗೆ ಬಂದ ಬಗ್ಗೆ ಮಾತ್ರ ನಾನು ನನ್ನ ರಿಟನ್ಸ್ ನಲ್ಲಿ ಕಾಣಿಸಿದ್ದೇನೆ ತದನಂತರ ನಾನು ಕಾಣಿಸಿಲ್ಲ ಎಂದರೆ ಸಾಕ್ಷಿ 2020 ರವರೆಗೆ ಒಂದನೇ ಪ್ರತಿವಾದಿ ನನ್ನ ಅಣ್ಣನೇ ನಮ್ಮ ರಿಟನ್ಸ್ ಸಲ್ಲಿಸುತಿದ್ದರು. ಆದ್ದರಿಂದ ಅವರು ಹಾಗೇ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ . ನಮ್ಮ ಖಾತೆಗೆ ಬಾಡಿಗೆ ಬರುತಿದ್ದುದು ನಿಂತು ಹೋದ ಬಗ್ಗೆ ನಾನು ಕೇಸು ಮಾಡಿದ ಮೇಲೆ ಗೊತ್ತಾಯಿತು. ಆಗ ನಾನು ಬ್ಯಾಂಕ್ ಗೆ ಹೋಗಿ ಕೇಳಿದೆ ಆಗ ಅವರು ಪ್ರತಿ ತಿಂಗಳು ಯಾವುದೇ ಹಣ ಬೀಳುತ್ತಿಲ್ಲ ಎಂದು ಹೇಳಿದರು . ನಾನು ಮಂಗಳೂರಿನ MT Educare ಗೆ ಹೋಗಿ 2-3 ಬಾರಿ ಬಾಡಿಗೆ ಬಗ್ಗೆ ವಿಚಾರಿಸಿದಾಗ ಅವರು ಒಂದನೇ ಪ್ರತಿವಾದಿ ನನ್ನ ಅಣ್ಣ Settlement Deed ಆದ ಬಗ್ಗೆ ತಿಳಿಸಿದ್ದರಿಂದ ನಿಮಗೆ ಬಾಡಿಗೆ ಹಾಕುತಿಲ್ಲ ಎಂದು ಅವರು ತಿಳಿಸಿರುತಾರೆ ಎಂದರೆ ಸಾಕ್ಷಿ ನಾನು ಮಂಗಳೂರಿನ MT Educare ಗೆ ಹೋಗಿಯೇ ಇಲ್ಲ ಆದ್ದರಿಂದ ಅವರು ತಿಳಿಸುವ ಪ್ರಮೇಯೇ ಇಲ್ಲ ಎಂದು ತಿಳಿಸಿರುತ್ತಾರೆ . ಬ್ಯಾಂಕ್ ನವರು ಯಾವುದೇ ಹಣ ಬೀಳುತಿಲ್ಲ ಎಂದು ಹೇಳಿದ ನಂತರ MT Educare ನವರಿಗೆ ನೋಟಿಸು ಕೊಟ್ಟಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅಷ್ಟರಲ್ಲಿ ಅವರು ಬೋರ್ಡ್ ನು ಕಿತ್ತು ಹಾಕಿ ಹೋಗಿದ್ದರು ಬೇರೆ ಬೋರ್ಡ್ ಇತ್ತು ಎಂದು ತಿಳಿಸಿರುತ್ತಾರೆ. MT Educare ನವರು ಐಟಂ ನಂ 4 ರ ಸ್ವತಿತನಲ್ಲಿ ಬಿಟ್ಟು ಹೋದ ಬಗ್ಗೆ ನಮಗೆ ದಾವೆ ಹಾಕಿದ ನಂತರ ಗೊತ್ತಾಯಿತು . ಐಟಂ ನಂ 4 ರ ಸ್ವತ್ತನ್ನು MT Eduare ರವರ ನಂತರ Siddanth Foundation ರವರಿಗೆ ಕೊಟ್ಟ

ಬಗ್ಗೆ ನನಗೆ ದಾವೆ ಹಾಕುವಾಗ ಗೊತ್ತಾಯಿತು . Siddanth Foundation ರವರು ಐಟಂ ನಂ 4 ರಲ್ಲಿ ಸ್ವತ್ತಿನಲ್ಲಿ ತ್ರಿಷಾ ಕಾಲೇಜನ್ನು ನಡೆಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ . ಸಾಕ್ಷಿ ಮುಂದುವರಿದು ಕಾಲೇಜು ನಡೆಯುತ್ತಿದ್ದರ ಬಗ್ಗೆ ಗೊತ್ತಿತ್ತು ಯಾವ ಕಾಲೇಜು ಎಂದು ಗೊತ್ತಿಲ್ಲ. ಫೆಬ್ರವರಿ 2020 ಕ್ಕೆ Siddanth Foundation ರವರು ಕಟ್ಟಡವನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಕಡೆಗೆ ಗೊತ್ತಾಯಿತು . ದಾವೆ ದಾಖಲು ಮಾಡುವ ಸಮಯದಲ್ಲಿ ಐಟಂ ನಂ 4 ರ ಸ್ವತ್ತಿನ ಖಾತೆ ಒಂದನೇ ಪ್ರತಿವಾದಿಯ ಹೆಸರಿಗೆ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ . ಆ ನಂತರ ಅದಕ್ಕೆ ಸಂಬಂದಪಟ್ಟ ಮುನ್ಸಿಪಾಲಿಟಿಯ ಎಲ್ಲಾ ದಾಖಲೆಗಳು ಮತ್ತು ಕಂದಾಯ ವಗ್ಯೆರೆಯನ್ನು ಒಂದನೇ ಪ್ರತಿವಾದಿ ನನ್ನ ಅಣ್ಣ ಕಟ್ಟಿಕ್ಕೊಂಡು ಅವರ ಹೆಸರಿನಲ್ಲಿ ಬರುತಿದೆ ಎಂದರೆ ಸಾಕ್ಷಿ ಅವರು ಮೋಸ ಮಾಡಿಕೊಂಡು ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ.

ಐಟಂ ನಂ 4 ರ ಸ್ವತ್ತಿನಲ್ಲಿ lift , Generator ಮತ್ತು ವಿದ್ಯುತ್ ಜೋಡಣೆಗಳನ್ನು ಒಂದನೇ ಪ್ರತಿವಾದಿಯೇ ಮಾಡಿಸಿದ್ದಾರೆ ಎಂದರೆ ಸಾಕ್ಷಿ ಮನೆಯ ಹಣದಿಂದ ಮಾಡಿಸಿದ್ದಾರೆ ಎಂದು ತಿಳಿಸಿರುತ್ತಾರೆ. Settlement Deed ಆದ ನಂತರ lift repair , ವಿದ್ಯುತ್ ವಯರಿಂಗ್ ಬದಲಾವಣೆ ಹೊಸ Electric panel ಗಳನ್ನು ಒಂದನೇ ಪ್ರತಿವಾದಿಯೇ ಮಾಡಿಸಿದ್ದಾರೆ ಎಂದರೆ ಸಾಕ್ಷಿ ಯಾವ Settlement Deed ಫೋರ್ಜರಿ ಮಾಡಿ ಮಾಡಿಕೊಂಡಿರುತ್ತಾರೆ ಎಂದು ಸಾಕ್ಷಿ ತಿಳಿಸಿರುತ್ತಾರೆ. 2020 ರ ನಂತರ ಅವರು ಎಲ್ಲವನ್ನು ಮಾಡಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಐಟಂ ನಂ 4 ರ ಸ್ವತ್ತಿನಲ್ಲಿ 10 Toilet ಗಳನ್ನು ಒಂದನೇ ಪ್ರತಿವಾದಿ ನನ್ನ ಅಣ್ಣ ಕಟ್ಟಿಸಿದ್ದಾರೆ ಎಂದರೆ 2020 ರವರೆಗೆ ಕಟ್ಟಿಸಿರಲಿಲ್ಲ ಎಂದು ತಿಳಿಸಿರುತ್ತಾರೆ . ಈ ಎಲ್ಲಾ ಖರ್ಚುಗಳಿಗಾಗಿ ನನ್ನ ಅಣ್ಣ 80 ಲಕ್ಷ ಗಳನ್ನು ಖರ್ಚು ಮಾಡಿದ್ದಾರೆ ಎಂದರೆ ಸಾಕ್ಷಿ ಏನೇ ಖರ್ಚು ಮಾಡಿದ್ದರೂ ಕೂಡ ಅದು ಮನೆಯ

ಹಣವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ನಾನು settlement deed ನ್ನು ಸಬ್ ರಿಜಿಸ್ಟ್ರಾರ್ ಕಚೇರಿಯಿಂದ ಪಡೆದು ಹಾಜರುಪಡಿಸಿದ್ದೇನೆ ಎಂದರೆ ಸರಿ .

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಗೆ ಕಾಲವಕಾಶ ಕೋರಿದ್ದು , ನೀಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.